ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಬಂದಿದೆ.

ಆ) ಇಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ಈ ಹಿಂದಿನಂತೆ ಪಟ್ಟಣ ಪಂಚಾಯ್ತಿಗಳಿಗೆ ನೀಡುವ ಎಸ್ಎಫ್ಸಿ ಮುಕ್ತನಿಧಿ, 14ನೇ ಹಣಕಾಸು ಆಯೋಗದ ಅನುದಾನ, ಸಿಎಂಎಸ್ಎಂಟಿಡಿಪಿ ಹಂತ–2ರ ಯೋಜನೆಯಡಿ ನೀಡುವ ಅನುದಾನಗಳಲ್ಲಿ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ರೂಪಿಸಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಶಾದಿ ಭಾಗ್ಯ ಯೋಜನೆಯ ಅನುಷ್ಠಾನ

5351 (5411); ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ)

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಶಾದಿಭಾಗ್ಯ ಯೋಜನಾನುಷ್ಠಾನದನ್ವಯ ಮಂಜೂರಾದ ಮತ್ತು ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು;

ಆ) ಸದರಿ ಅವಧಿಯಲ್ಲಿ ಯೋಜನೆ ಸೌಲಭ್ಯವನ್ನು ಪಡೆದುಕೊಳ್ಳಲು ಬಂದ ಮನವಿಗಳು ಮತ್ತು ಆಯ್ಕೆ ಮಾಡಿದ ಫಲಾನುಭವಿಗಳೆಷ್ಟು;

ಇ) ಯೋಜನಾ ಸೌಲಭ್ಯದ ಫಲಾನುಭವಿಗಳಿಗೆ ನೀಡುವ ಆರ್ಥಿಕ ನೆರವನ್ನು ಪಾವತಿಸುವಲ್ಲಿ ವಿಳಂಬವಾಗಿರುವ ಮತ್ತು ದೀರ್ಘಕಾಲದಿಂದ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳ ಸಂಖ್ಯೆ ಮತ್ತು ತ್ವರಿತ ಪಾವತಿಗಾಗಿ ಸರ್ಕಾರದ ಸಕಾಲಿಕ ಕ್ರಮಗಳು ಯಾವುವು;

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಅಲ್ಪಸಂಖ್ಯಾತರ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಬಿದಾಯಿ ಯೋಜನೆಗೆ ರೂ. 66.70.00 ಲಕ್ಷಗಳನ್ನು ಮಂಜೂರು ಮಾಡಿದ್ದು, ಇದನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ.

ಆ) ಸದರಿ ಯೋಜನೆಯಡಿ 25168 ಅರ್ಜಿಗಳು ಸ್ವೀಕರಿಸಿದ್ದು 13340 ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರ "ಅನುಬಂಧ–1"ರಲ್ಲಿ ಲಗತ್ತಿಸಿದೆ.

ಇ) ದೀರ್ಘಕಾಲದಿಂದ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ಪಾವತಿಸಲು ಆರ್ಥಿಕ ಇಲಾಖೆಯಿಂದ ಹೆಚ್ಚುವರಿ ಅನುದಾನವನ್ನು ಕೋರಲಾಗಿದೆ. ಅನುದಾನ ಮಂಜೂರಾದ ತಕ್ಷಣ ಅನುದಾನದ ಲಭ್ಯತೆಗನುಗುಣವಾಗಿ ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ನೀಡಲಾಗುವುದು.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್. ಎ. (ಶಾಂತಿನಗರ) ಮತಕ್ಷೇತ್ರ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 5411 ಕ್ಕೆ ಅನುಬಂಧ–1

2013–14 ರಿಂದ 2015–16ನೇ ಸಾಲಿನ ವರೆಗೆ ಬಿದಾಯಿ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ

ಕ್ರ.ಸಂ.	ಜಿಲ್ಲೆ	ಸ್ವೀಕರಿಸಿದ ಅರ್ಜಿಗಳು	ಅನುದಾನ ಬಿಡುಗಡೆಯಾಗಿರುವ ಅರ್ಜಿಗಳು
1	ಬೆಂಗಳೂರು (ನ)	2738	1259
2	ಬೆಂಗಳೂರು (ಗ್ರಾ)	303	164

3	ಬಾಗಲಕೋಟೆ	867	452
4	ಬೆಳಗಾವಿ	1891	405
5	ಬಳ್ಳಾರಿ	427	422
6	ಬೀದರ್	1503	837
7	ಬಿಜಾಪುರ	1158	551
8	ಚಾಮರಾಜನಗರ	155	155
9	ಚಿಕ್ಕಮಗಳೂರು	322	184
10	ಚಿತ್ರದುರ್ಗ	352	204
11	ಚಿಕ್ಕಬಳ್ಳಾಪುರ	590	287
12	ದಕ್ಷಿಣಕನ್ನಡ	1345	815
13	ದಾವಣಗೆರೆ	711	378
14	ಧಾರವಾಡ	1462	707
15	ಗದಗ	408	287
16	ಗುಲ್ಬರ್ಗಾ	2256	935
17	ಹಾಸನ	461	249
18	ಹಾವೇರಿ	1722	776
19	ಕೊಡಗು	308	207
20	ಕೋಲಾರ	400	197
21	ಕೊಪ್ಪಳ	628	448
22	ಮಂಡ್ಯ	212	114
23	ಮೈಸೂರು	761	404

24	ರಾಯಚೂರು	878	401
25	ರಾಮನಗರ	294	187
26	ಶಿವಮೊಗ್ಗ	753	413
27	ತುಮಕೂರು	870	511
28	ಉಡುಪಿ	354	227
29	ಉತ್ತರ ಕನ್ನಡ	626	322
30	ಯಾದಗಿರಿ	773	442
	ಒಟ್ಟು	25168	13340

ಕುಡಿಯುವ ನೀರಿನ ಸೌಲಭ್ಯ

5352 (5432); ಶ್ರಿಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ನಗರದಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬೋರ್ಡ್ ವತಿಯಿಂದ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಯು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಕ್ರಮವನ್ನು ಕೈಕೊಳ್ಳಲು ಸರ್ಕಾರ ನಿರ್ಧರಿಸಿದೆ; ಹೊಣೆಗಾರರು ಯಾರು;

ಇ) ಗುತ್ತಿಗೆದಾರರಿಗೆ ಈವರೆಗೆ ಬಿಡುಗಡೆಗೊಳಿಸಿದ ಅನುದಾನವೆಷ್ಟು; ಬಿಡುಗಡೆ ಮಾಡಬೇಕಾಗಿರುವ ಅನುದಾನವೆಷ್ಟು; ಕಾಮಗಾರಿಯ ಅಂದಾಜು ವೆಚ್ಚವೆಷ್ಟು;

ಈ) ಗುತ್ತಿಗೆದಾರರಿಗೆ ಎಷ್ಟು ಬಾರಿ ವಿಸ್ತರಣೆ ಮಾಡಲಾಗಿದೆ; ಅಂತಿಮ ಗಡವು ನೀಡಲಾಗಿದೆಯಾ; ಅದರಿಂದ ದಂಡದ ರೂಪದಲ್ಲಿ ಸರ್ಕಾರಕ್ಕೆ